ಶ್ರೀ ಜೆ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳು).—

ಅ) ಹೌದು.

ಆ) ಕಾವೇರಿ ಬೇಸಿನ್‌ನಲ್ಲಿ ೧೯೭೧ರವರೆಗೆ ೧೭೭ ಟಿಎಂಸಿ ನೀರನ್ನು ಕರ್ನಾಟಕ ಉಪಯೋಗಿಸಿದೆ. ಅಂತಿಮವಾಗಿ ಒಟ್ಟು ೪೧೪ ಟಿಎಂಸಿ ನೀರನ್ನು ಉಪಯೋಗಿಸಲು ಯೋಜನೆಗಳನ್ನು ತಯಾರಿಸಿದೆ. ಮಾರ್ಚ್ ೧೯೮೯ರವರೆಗೆ ೬೪೦ ಕೋಟಿ ರೂಪಾಯಿಗಳ ವೆಚ್ಚವಾಗಿದೆ. ಕೃಷ್ಣಾ ಬೇಸಿನ್‌ನಲ್ಲಿ ಒಟ್ಟು ೭೫೭ ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಲು ೫೨ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಸಿದ್ಧಗೊಳಿಸಲಾಗಿದ್ದು. ೨೪ ಯೋಜನೆಗಳು ಮುಗಿದಿದೆ ೧೩ ಯೋಜನೆಗಳು ನಿರ್ಮಾಣ ಹಂತದಲ್ಲಿದ್ದು ಉಳಿದ ೧೫ ಯೋಜನೆಗಳನ್ನು ಕೈಗೊಳ್ಳಬೇಕಾಗಿದೆ. ಕೃಷ್ಣಾ ಬೇಸಿನ್‌ನ ಎಲ್ಲಾ ಯೋಜನೆಗಳನ್ನು ಕ್ರಿ. ಶ. ೨೦೦೦ ಇಸವಿಯೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ರಾಜ್ಯದ ಜನತಾ ನ್ಯಾಯಾಲಯಗಳು

೧೦೦. ಶ್ರೀ ಜೆ. ರಾಜುಗೌಡ (ಹನೂರು).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಯೋಜನೆ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೮–೮೯ ಹಾಗೂ ೧೯೮೯–೯೦ರಲ್ಲಿ ರಾಜ್ಯದಲ್ಲಿನ ಜನತಾ ನ್ಯಾಯಾಲಯದಿಂದ ಎಷ್ಟು ವ್ಯಾಜ್ಯಗಳು ತೀರ್ಮಾನಗೊಂಡಿವೆ ?

ಆ) ಇಂಥ ಶಿಬಿರಗಳು ಪ್ರತಿ ತಿಂಗಳು ಪ್ರತಿ ತಾಲ್ಲೂಕಿನಲ್ಲೂ ನಡೆಸಲು ಏನಾದರೂ ಅಡ್ಡಿ ಆತಂಕ ಇದೆಯೇ ?

ಶ್ರೀ ಎಂ. ವೀರಪ್ಪಮೊಯಿಲಿ (ಕಾನೂನು, ಸಂಸದೀಯ ವ್ಯವಹಾರಗಳು, ಯೋಜನೆ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳ ಮಂತ್ರಿಗಳು).—

ಅ) ೧೯೮೮–೮೯ರಲ್ಲಿ—೭,೪೨೬ ವ್ಯಾಜ್ಯಗಳು
೧೯೮೯–೯೦ರಲ್ಲಿ—೫,೧೭೩ ವ್ಯಾಜ್ಯಗಳು
(೪–೩–೯೦ರವರೆಗೆ) ———
ಒಟ್ಟು ೧೨,೫೯೯ ವ್ಯಾಜ್ಯಗಳು

ಆ) ಕಾನೂನಿನ ನೆರವು ಸಮಿತಿಗಳಲ್ಲಿ ಸಾಕಷ್ಟು ಸಿಬ್ಬಂದಿ ಹಾಗೂ ನ್ಯಾಯವಾದಿಗಳ ಹೆಚ್ಚಿನ ಸಹಕಾರ ದೊರಕಿದಲ್ಲಿ ಪ್ರತಿ ತಿಂಗಳು ಪ್ರತಿ ತಾಲ್ಲೂಕಿನಲ್ಲಿ ಹೆಚ್ಚಿನ ಜನತಾ ನ್ಯಾಯ್ಯಾಲಯ ನಡೆಸಲು ಯಾವ ತೊಂದರೆಗಳು ಇಲ್ಲ.

ರಾಜ್ಯ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಕ್ರೀಡಾ ಸಂಸ್ಥೆಗಳು

೧೦೫. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ರಾಜ್ಯ ಮಟ್ಟದ ಕ್ರೀಡಾ ಸಂಸ್ಥೆಗಳು ಯಾವುವು ?

ಆ) ಈ ಅನುದಾನಿತ ಸಂಸ್ಥೆಗಳ ಆಡಳಿತ ನಿಯಮ ಬದ್ಧವಾಗಿ ನಡೆಯುವಂತೆ ನೋಡಿಕೊಳ್ಳಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಇ) ರಾಜ್ಯದಲ್ಲಿ ಯಾವುದಾದರೂ ಕ್ರೀಡಾ ಸಂಸ್ಥೆಗಳ ಆಡಳಿತ ಸಮರ್ಪಕವಾಗಿ ನಡೆಯುತ್ತಿಲ್ಲ ವೆಂದು ದೂರುಗಳೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದರೆ ಆ ಕ್ರೀಡಾ ಸಂಸ್ಥೆಗಳು ಯಾವುವು ?